ಪ್ರಮಾಣ ವಚನ ಬೋಧಿಸಿದ ದಿನಾಂಕಃ **19.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಃ ಶ್ರೀ ವೈ ಎಸ್ ಆರ್ ವಕೀಲರಿಂದಃ–

ನಾನು ವಾದಿ ಪರ ಸಾಕ್ಷಿ ಇರುತ್ತೇನೆ. ನಾನು ಕೊಟ್ಟ ಮಾಹಿತಿಯ ಪ್ರಕಾರ ನನ್ನ ವಕೀಲರು ನನ್ನ ಸಾಕ್ಷ್ಯದ ಹೇಳಿಕೆಯ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ತಯಾರಿಸಿರುತ್ತಾರೆ. ಅದರಲ್ಲಿರುವ ಸಂಗತಿಗಳು ಸರಿ ಇವೆ. ಅದನ್ನು ಈಗ ಹಾಜರು ಮಾಡುತ್ತಿದ್ದೇನೆ.

ಸಾಕ್ಷಿಗೆ ನಿಪಿ **1** ಕ್ರಯದ ಕರಾರು ಪತ್ರವನ್ನು ತೋರಿಸಲಾಗಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1**(ಜಿ) ಎಂದು ಗುರುತಿಸಲಾಯಿತು. ಸದರಿ ಕರಾರು ಪತ್ರವನ್ನು ನಾನೇ ಬರವಣಿಗೆ ಮಾಡಿರುತ್ತೇನೆ. ಆ ಸಮಯದಲ್ಲಿ ಪ್ರಕಾಶ್, ಸರಸ್ವತಮ್ಮ, ಸುಮತಿ ಮತ್ತು ಸೃಷ್ಟಿ ಹಾಜರಿದ್ದರು. ಅದರ ಜೊತೆಗೆ ಸಾಕ್ಷಿದಾರರಾದ ಜಯರಾಮಯ್ಯ ಮತ್ತು ನರಸಿಂಹಸ್ವಾಮಿ ಹಾಜರು ಇದ್ದರು. ಸಾಕ್ಷಿಯು ವಾದಿ ಮತ್ತು ಪ್ರತಿವಾದಿಯರ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ **1**(ಎ) ಯಿಂದ (ಎಫ್) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಸಾಕ್ಷಿದಾರರಾದ ನರಸಿಂಹಸ್ವಾಮಿ ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ **1**(ಹೆಚ್) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮುಕ್ತಾಯಗೊಂಡಿದೆ.

ಪಾಟೀ ಸವಾಲು ಃ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.